ಆಹಾರ ಧಾನ್ಯಗಳ ಬೆಲೆ ತೀವ್ರ ಏರಿಕೆ

೪೦೦೨. ಶ್ರೀ ಬಿ. ಎ. ಉಮರಬ್ಬ (ವಿಟ್ಲ).— ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಹಾಗೂ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಇತ್ತೀಚಿನ ದಿನಗಳಲ್ಲಿ ಎಲ್ಲಾ ಆಹಾರ ಧಾನ್ಯಗಳ ಬೆಲೆ ತೀವ್ರವಾಗಿ ಏರಿಕೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಇದಕ್ಕೆ ಕಾರಣಗಳೇನು ?

ಇ) ಬೆಲೆ ಏರಿಕೆಯ ಹತೋಟಿಕೆ ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು ಮಂತ್ರು ಸಂಸದೀಯ ವ್ಯವಹಾರಗಳ ಹಾಗೂ ನಾಗರೀಕ ಸರಬರಾಜು ಮಂತ್ರಿಗಳು).—

ಅ) ಬಂದಿದೆ.

ಆ) ಕಳೆದ ಕೆಲವು ವರ್ಷಗಳಲ್ಲಿ ಮಳೆಯ ಅಭಾವದಿಂದ ದೇಶದಲ್ಲಿನ ಆಹಾರ ಧಾನ್ಯಗಳ ಉತ್ಪತ್ತಿ ಕಡಿತಗೊಂಡಿದೆ. ಅಲ್ಲದೆ ಕಳೆದ ಹಲವಾರು ತಿಂಗಳುಗಳಿಂದ ಕೇಂದ್ರ ಸರ್ಕಾರವು ವಿತರಿಸುತ್ತಿರುವ ಅಕ್ಕಿ, ಗೋಧಿ ಮತ್ತು ಖಾದ್ಯ ತೈಲಗಳ ಪ್ರಮಾಣವು ಕಡಿಮೆಯಾಗಿದೆ. ತತ್ಪರಿಣಾಮವಾಗಿ ತೆರೆದ ಮಾರುಕಟ್ಟೆಯಲ್ಲಿನ ವಸ್ತುಗಳ ಬೆಲೆ ಏರಿದೆ.

ಇ) ಬೆಂಗಳೂರಿನ ಆಹಾರ ಮತ್ತು ನಾಗರೀಕ ಸರಬರಾಜು ನಿರ್ದೇಶನಾಲಯದ ಕಛೇರಿಯಲ್ಲಿ ಸ್ಥಾಪಿತಗೊಂಡಿರುವ ನಿಯಂತ್ರಣ 'ಕೊಠಡಿ'ಗೆ ಆಹಾರ ಸಾಮಗ್ರಿಗಳ ಬೆಲೆ ಏರಿಕೆಯ ಮಾಹಿತಿ ದೊರೆಯುತ್ತಿರುವುದರ ಮೇರೆಗೆ, ಸಂಬಂಧಪಟ್ಟ ಅಧಿಕಾರಿಗಳಿಗೂ ಮತ್ತು ಆಹಾರ ಕೋಶಕ್ಕೂ ಅಕ್ರಮ ದಾಸ್ತಾನು ಮಾಡದಂತೆಯು ಮತ್ತು ಕಾಳಸಂತೆ ವ್ಯಾಪಾರವಾಗದಂತೆ ನೋಡಿಕೊಳ್ಳಲು ಸೂಕ್ತ ಸೂಚನೆಗಳನ್ನು ಕೊಡುತ್ತಿದೆ. ಜಿಲ್ಲಾ ಪಂಟ್ಟದಲ್ಲೂ ಸಹ 'ನಿಯಂತ್ರಣ ಕೊಠಡಿ'ಯು ತೆರೆದ ಮಾರುಕಟ್ಟೆಯಲ್ಲಿನ ಬೆಲೆ ಪ್ರವೃತ್ತಿಯನ್ನು ವೀಕ್ಷಿಸುತ್ತಿದ್ದು ಬೆಲೆ ನಿಯಂತ್ರಣದಲ್ಲಿಡಲು ಅಗತ್ಯವಾದ ಸೂಕ್ತಾಣಿ ಕ್ರಮ ತೆಗೆದುಕೊಳ್ಳುತ್ತಿದೆ. ಹಾಗೂ ತಪ್ಪಿತಸ್ಥರು ಕಾನೂನು ಬಾಹಿರವಾಗಿ ಕೂಡಿಟ್ಟ ದಾಸ್ತಾನನ್ನು ಬಿಡುಗಡೆ ಮಾಡುತ್ತಿರುತ್ತಾರೆ.

೧೯೮೨ರ ನೆರೆ ಹಾವಳಿಯ ಸಂದರ್ಭದಲ್ಲಿ ಕುಮಟಾ ತಾಲ್ಲೂಕಿಗೆ ಮಂಜೂರಿಯಾದ ಹಣದ ಉಳಿತಾಯ

೪೦೮೨. ಶ್ರೀ ಎಸ್. ಹೆಚ್. ಗೌಡ (ಕುಮಟಾ).— ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ೧೯೮೨ರ ನೆರೆ ಹಾವಳಿಯ ಸಂದರ್ಭದಲ್ಲಿ ಉತ್ತರ ಕನ್ನಡ ಜಿಲ್ಲೆಯ ಕುಮಟಾ ತಾಲ್ಲೂಕಿನಲ್ಲಿ ನಿರಾಶ್ರಿತರಾದ ಕುಟುಂಬಗಳ ಸಂಖ್ಯೆ ಎಷ್ಟು?

ಆ) ಅಂತಹ ಕುಟುಂಬಿಗಳ ಮರು ವಸತಿಗಾಗಿ ಮಂಜೂರಾಗಿ ಬಿಡುಗಡೆಯಾದ ಹಣದ ಪೊತ್ತವೆಷ್ಟು?

ಇ) ಬಿಡುಗಡೆಯಾದ ಹಣದಲ್ಲಿ ಇನ್ನೂ ವಿಚಾರ್ಗದೆ ಉಳಿದ ಹಣವೆಷ್ಟು?

ಈ) ಉಳಿದ ಹಣವನ್ನು ಇತರೆ ಯಾವ ಉದ್ದೇಶಕ್ಕಾಗಿ ಬಳಸಲಾಗಿದೆ?

ಶ್ರೀ ಎಸ್. ಆರ್ ಬೊಮ್ಮಾಯಿ (ಮುಖ್ಯಮಂತ್ರಿಗಳು).—

ಅ) ೧೬೨೯ ಕುಟುಂಬಗಳು.

ಆ) ರೂ. ೫೦.೧೩,೩೨೮-೦೦.

೫) ರೂ. ೩,೦೧,೯೨೧–೪೫.

ಈ)

	ರೂ.
೧) ಸರ್ಕಾರಕ್ಕೆ ಹಿಂದಿರುಗಿಸಿದ ಪೊತ್ತ (ಸರಂಡರ್)	೩,೩೭೨–೦೦
೨) ಸರ್ಕಾರಕ್ಕೆ ಜಮೆ ಮಾಡಿದ ಪೊತ್ತ	೨,೭೮,೫೧೨–೪೫
೩) ದುರಂಪಯೋಗವಾದ ಹಣದ ಪೊತ್ತ (ಸಂಬಂಧಪಟ್ಟವರ ಮೇಲೆ ಕ್ರಮ ಜರುಗಿಸಲಾಗಿದೆ)	೨೦,೦೩೬.೬೦
ಒಟ್ಟು	೩,೦೧.೯೨೧.೪೫

ಕೃಷಿ ಕಾರ್ಮಿಕರಿಗೆ ಕನಿಷ್ಠ ವೇತನ

೨೬೧. ಶ್ರೀ ಆರ್. ವೆಂಕಟರಾಮಯ್ಯ (ಮುಳಬಾಗಿಲು).— ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

೧) ರಾಜ್ಯದಲ್ಲಿರುವ ಕೃಷಿ ಕಾರ್ಮಿಕರ ಸಂಖ್ಯೆಯೆಷ್ಟು (ಜಿಲ್ಲಾವಾರು ವಿವರ ನೀಡುವುದು)

೨) ಕೃಷಿ ಕಾರ್ಮಿಕರಿಗೆ ಕನಿಷ್ಠ ವೇತನ ನಿಗದಿಯಾಗಿದೆಯೇ ಹಾಗೂ ಕನಿಷ್ಠ ವೇತನವೆಷ್ಟು? (ಗಂಡಸರಿಗೆ ಹಾಗೂ ಮಹಿಳೆಯರಿಗೆ ನಿಗದಿಪಡಿಸಿರುವ ವೇತನದ ವಿವರ ನೀಡುವುದು)

೩) ಕನಿಷ್ಠ ವೇತನವನ್ನು ಜಾರಿಗೆ ಕೊಡಲು ಸರ್ಕಾರದವರು ತೆಗೆದುಕೊಂಡಿರುವ ಕ್ರಮಗಳೇನು?

ಶ್ರೀ ಎಸ್. ಆರ್. ಬೊಮ್ಮಾಯಿ (ಮುಖ್ಯ ಮಂತ್ರಿಗಳು).—

೧) ೧೯೮೧ನೇ ಸಾಲಿನ ಜನಗಣತಿಯ ಪ್ರಕಾರ ರಾಜ್ಯದಲ್ಲಿರುವ ಒಟ್ಟು ಕೃಷಿ ಕಾರ್ಮಿಕರ ಸಂಖ್ಯೆ ೩೬,೩೬,೨೦೦.

ಜಿಲ್ಲಾವಾರು ಮಾಹಿತಿಯನ್ನು ಅನುಬಂಧದಲ್ಲಿ (೧) ನೀಡಿದೆ.

೨) ಕೃಷಿ ಕಾರ್ಮಿಕರಿಗೆ ಕನಿಷ್ಠ ವೇತನವನ್ನು ೧೯೮೮ರಲ್ಲಿ ಪರಿಷ್ಕರಿಸಲಾಗಿದೆ ಮತ್ತು ಕನಿಷ್ಠ ವೇತನವು ರೂ. ೧೨.೦೦ ಆಗಿರುತ್ತದೆ. ಕೆಲಸದ ಸ್ವರೂಪವು ಒಂದೇ ರೀತಿಯದಾಗಿರುವ ಸಂದರ್ಭದಲ್ಲಿ ಗಂಡಸರಿಗೆ ಮತ್ತು ಮಹಿಳೆಯರಿಗೆ ಸಮಾನ ಮಜೂರಿಯ ದರಗಳನ್ನು ನೀಡಬೇಕಾಗಿರುತ್ತದೆ.

ವರ್ಗವಾರು ಕನಿಷ್ಠ ವೇತನದ ಮಾಹಿತಿಯನ್ನು ಅನುಬಂಧ (೨)ರಲ್ಲಿ ನೀಡಲಾಗಿದೆ.

೩) ಕಾರ್ಮಿಕ ನಿರೀಕ್ಷಕರು ಮೇಲ್ವಿಚಾರಣೆಯನ್ನು ನೋಡಿಕೊಳ್ಳುತ್ತಿದ್ದಾರೆ. ಅಲ್ಲದೆ ರಾಜಸ್ವ ನಿರೀಕ್ಷಕರು ಸಹ ರಾಜ್ಯಾದ್ಯಂತ ಕೃಷಿ ಕಾರ್ಮಿಕರ ಕನಿಷ್ಠ ವೇತನವನ್ನು ಜಾರಿಗೊಳಿಸಲು ನಿರೀಕ್ಷಕರುಗಳಾಗಿ ನೇಮಿಸಲ್ಪಟ್ಟಿದ್ದಾರೆ.